CALLING ATTENTION TO MATTERS OF URGENT PUBLIC IMPORTANCE

(i) *re : Murder of a Scheduled Caste Person of Bommarasahalli Anekal Taluk*

SRI M. B. RAMASWAMY(Anekal).—Madam, I call the attention of the Chief Minister about the murder of a Scheduled Caste person of Bommarasahalli, Anekal Taluk.

SRI H. M. CHANNABASAPPA (Minister for Public Works).—Sir, on behalf of the Hon'ble Chief Minister in response to the Calling Attention notice of the Hon'ble Member Sri M. B. Ramaswamy, I wish to make the following statement.—

On 30th January 1976 at about 10 a. m. one Bovi Vijramuniyappa s/o Gurappa of Bommandahalli, Jigni Hobli Anekal Taluk presented a written complaint to the Police Sub-Inspector, Anekal Police Station to the effect that his uncle Yellabovi, s/o Venkatappa aged about 55 years of Bommandahalli village went to sleep in his threshing yard on the evening of 17th January 1976 and that he did not return home. He and others searched for him but was not traced. On 30th January 1976 one Chinnabovi when grazing his cattle, found dogs eating a dead body which was buried. He went on the information given by Chinnabovi and found a dead body buried in the Halla and it was partially visible He suspected it was the dead body of his uncle Yellabovi, He further added that Veerabhadrappa and four others of the same village would have murdered his uncle Yellabovi and buried it. The Police Sub-Inspector Anekal registered a case in Cr. No. 13/76 u/s 302, 34 I. P. C. The same day the Police Sub-Inspector took the orders of the Sub-Divisional Magistrate to exhume the dead body and to conduct preliminary investigation over the dead body.

On 31st January 1976 the Police Sub-Inspector got the body exhumed and conducted preliminary investigation over the dead body. The body was indentified as that of Yellabovi by the relatives of the deceased. There were two cut injuries on the neck. The body was subjected for Post Mortem Examination, on 31st January 1976 at the same spot where the dead body was found. It is true that Yellabovi was murdered and buried to suppress the evidence. Investigation in the case is going on.

ಶ್ರೀ ಎಂ. ಬಿ. ರಾಮುಸ್ವಾಮಿ.—ಅಧ್ಯಕ್ಷರೇ, ಬೊಮ್ಮರನ ಹಳ್ಳಿಯಲ್ಲಿ ಕೊಲೆಯಾದ ಮೇಲೆ ಪೋಸ್ಟ್ ಮಾರ್ಟ್ ಮಾಡಿದ್ದೇವೆಂದು ಮಾನ್ಯ ಸಚಿವರು ಸ್ಪಷ್ಟವಾಗಿ ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ದೂರು ಕೊಟ್ಟು ಇಷ್ಟು ದಿವಸಗಳಾದರೂ ಕೂಡ ಅದರ ಬಗ್ಗೆ ಕ್ರಮ ತಗೆದು ಕೊಳ್ಳದೇ ಇರುವುದಕ್ಕೆ ಕಾರಣವೇನು ? ಇನ್ನು ಎರಡನೆಯದು ನೀವು ಎಷ್ಟು ಜನರನ್ನು ಇದರ

ಸಂಭಂದದಲ್ಲಿ ಅರೆಸ್ಟ್ ಮಾಡಿದ್ದೀರಿ ? ಎಷ್ಟು ಜನರ ಮೇಲೆ ಚಾರ್ಜ್ ಶೀಟ್ ಹಾಕಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತನಿಖೆ ನಡೆಯುತ್ತಿದೆ. ಪ್ರೈಮಾಫೇಶಿ ಕೇಸ್ ಎಂದು ತೀರ್ಮಾನವಾದ ಮೇಲೆ ಸಂಭಂದಪಟ್ಟವರ ಮೇಲೆ ಚಾರ್ಜ್ ಶೀಟ್‌ನ್ನು ಹಾಕ ಬೇಕಾಗುತ್ತದೆ. ದೂರು ಬಂದ ಕೂಡಲೇ ಯಾರಮೇಲೂ ಕೂಡ ಚಾರ್ಜ್ ಶೀಟನ್ನು ಹಾಕುವುದಕ್ಕೆ ಆಗುವುದಿಲ್ಲ. ತನಿಖೆ ನಡೆಯುತ್ತಿದೆ.

ಶ್ರೀ ಎಂ, ಬಿ. ರಾಮಸ್ವಾಮಿ.—ನಾನು ತಮಗೆ ಪ್ರಶ್ನೆ ಕೇಳಿರತಕ್ಕಂಥಾದ್ದು ಏನೆಂದರೆ ಎಷ್ಟು ಜನರನ್ನು ಇದರ ಸಂಭಂಧದಲ್ಲಿ ಇಲ್ಲಿಯವರೆಗೆ ಅರೆಸ್ಟ್ ಮಾಡಿದ್ದಿರಾ ಎಷ್ಟು ಜನರನ್ನು ಬೇಲ್ ಮೇಲೆ ಬಿಟ್ಟಿದ್ದೀರಿ ? ಅವರು ಏನಾದರೂ ಊರಿನಲ್ಲಿ ಇದ್ದಾರೋ ಅಥವಾ ಇಲ್ಲವೋ ? ಏತಕ್ಕೆಂದರೆ ನಾನು ಕೂಡ ವಕೀಲಗಿರಿ ಕೆಲಸ ಮಾಡುತ್ತಿರುವುದರಿಂದ ನನಗೆ ಗೊತ್ತು, ಇವತ್ತು ಮರ್ಡರ್ ಆದ ಮೇಲೆ ಪಂಚನಾಮೆ ಆದಮೇಲೆ ಇಷ್ಟು ದಿವಸದೊಳಗೇ ಚಾರ್ಜ್ ಶೀಟ್ ಹಾಕ ಬೇಕೆಂದು ಇರುತ್ತದೆ. ಆದರೆ ಇಲ್ಲಿಯವರೆಗೂ ಚಾರ್ಜ್ ಶೀಟನ್ನು ಹಾಕಿಲ್ಲ. ಇನ್ನು ಎಷ್ಟು ದಿವಸಗಳು ಬೇಕಾಗುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತನಿಖೆ ಮಾಡಿದ ಮೇಲೆ ತಪ್ಪು ಯಾರ ಮೇಲೆ ಬರುತ್ತದೆ ಎಂಬುದನ್ನು ನೋಡಿ, ಹೇಗೆ ಪ್ರೈಮಾಫೇಸಿ ಸಾಬೀತು ಆಗುತ್ತದೆ ಎನ್ನುವುದನ್ನು ಮನವರಿಕೆ ಮಾಡಿಕೊಂಡು ಆ ನಂತರ ನಾವು ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರೈಮಾಫೇಸಿ ಕೇಸ್ ಸಾಬೀತು ಆಗುತ್ತದೆ ಎನ್ನತಕ್ಕಂಥದ್ದು ಮನಸ್ಸಿಗೆ ಗೊತ್ತಾದ ಮೇಲೆಯೇ ಮುಂದಿನ ಕ್ರಮ ತೆಗೆದುಕೊಳ್ಳುವುದು.

ಶ್ರೀ ಎಂ. ಬಿ. ರಾಮಸ್ವಾಮಿ.—ನಾನು ಕೇಳಿತಕ್ಕಂಥದ್ದು ಪೀನಲ್ ಕೋಡ್ ಸೆಕ್ಷನ್ 302ರ ಪ್ರಕಾರ ಎಷ್ಟು ಜನರನ್ನು ಇಲ್ಲಿಯವರೆಗೆ ಅರೆಸ್ಟ್ ಮಾಡಿದ್ದೀರಿ ಎಂದು ? ಆ ವಿವರ ನಿಮ್ಮ ಹತ್ತಿರವಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೆಕ್ಷನ್ 302ರ ಪ್ರಕಾರ ಅರೆಸ್ಟ್ ಮಾಡಲೇಬೇಕು ಎನ್ನ ತಕ್ಕಂಥದೇನು ಇಲ್ಲ,

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ತಮಗೆ ಆ ರೀತಿ ಯಾರು ಹೇಳಿದರು ? ಅಧ್ಯಕ್ಷರೇ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತು ಮರ್ಡರ್ ಆದಮೇಲೆ ಪೀನಲ್ ಕೋಡ್‌ಸೆಕ್ಷನ್ 02 ಪ್ರಕಾರ ಮರ್ಡರ್ ಆಗಿದೆ ಎಂದು ದೂರು ಬಂದಾಗ ಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ ಅದರಂತೆ ಅದಕ್ಕೆ ಸಂಭಂದಪಟ್ಟವರನ್ನು ಅರೆಸ್ಟ್ ಮಾಡಿ ಚಾರ್ಜ್ ಶೀಟ್‌ಹಾಕ ಬೇಕಾಗುತ್ತದೆ. ಅದರಂತೆ ತಾವು ಇದಕ್ಕೆ ಸಂಭಂದಪಟ್ಟವರನ್ನು ಯಾರುಯಾರನ್ನು ಅರೆಸ್ಟ್ ಮಾಡಿದ್ದೀರಿ ? ತಾವು ಆ ರೀತಿ ಯಾರನ್ನೂ ಅರೆಸ್ಟ್ ಮಾಡಿಲ್ಲವೆಂದು ಹೇಳಿದರೆ ಬಹಳ ಆಶ್ಚರ್ಯ ವಾಗುತ್ತದೆ.

ಅಧ್ಯಕ್ಷರು—ತನಿಖೆ ನಡೆಸುತ್ತಿದ್ದೇವೆಂದು ಆಗಲೇ ಉತ್ತರ ಹೇಳಿದ್ದಾರೆ, ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು,

ಶ್ರೀ ಎಚ್ ಎಂ ಚನ್ನಬಸಪ್ಪ —ಇನ್ನೂ ಯಾರನ್ನೂ ಅರೆಸ್ಟ್ ಮಾಡಿಲ್ಲ.

ಶ್ರೀ ಎಂ. ಬಿ ರಾಮಸ್ವಾಮಿ.—ಏತಕ್ಕೆ ಮಾಡಿಲ್ಲ ?

ಶ್ರೀ ಎಚ್, ಎಂ. ಚನ್ನಬಸಪ್ಪ—ಸಾಕಷ್ಟು ಪ್ರೈಮಾಫೇಶಿ ಕೇಸ್ ಇದೆ ಎಂದು ಅವು ಸಾಬೀತು ಆಗುವವರೆಗೂ ಯಾರನ್ನು ಅರೆಸ್ಟ್ ಮಾಡುವುದಕ್ಕಾಗುವುದಿಲ್ಲ.

(*ii*) *re : Late Arrival and Departure of Buses in Hubli Division*

SRI B. G. BANAKAR —(Hirekerur) Madam, I call the attention of the Minister for Transport and Toursim to the late arrival and departure of buses in Hubli Division.